958(1185) ಶ್ರೀ ಕಿರಣ್ ಕುಮಾರ್ ಕೆ.ಎಸ್(ಕಳ್ಳಂಬೆಳ್ಳ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಹಾಗಲವಾಡಿ ಹೋಬಳಿಯ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಹೇಮಾವತಿ ಏತ ನೀರಾವರಿ ಯೋಜನೆ ಮೂಲಕ ಅನುಷ್ಠಾನಗೊಳಿಸಲು ಸರ್ಕಾರ ಯೋಜನೆ ರೂಪಿಸಿದೆಯೇ;

ಆ) ಹಾಗಿದ್ದಲ್ಲಿ ಯಾವಾಗ ರೂಪಿಸಲಾಗಿದೆ;

ಇ) ಇದಕ್ಕೆ ನಿಗಧಿ ಪಡಿಸಿರುವ ಹಣವೆಷ್ಟು ;

ಈ) ಕಾಮಗಾರಿ ಯಾವ ಹಂತದಲ್ಲಿದೆ;

ಉ) ಈ ಯೋಜನೆಯನ್ನು ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಗೆ ವಹಿಸಿರುವುದು ನಿಜವೇ;

ಊ) ಯಾವಾಗ ಕಾಮಗಾರಿ ಹಮ್ಮಿ ಕೊಳ್ಳಲಾಗುವುದು ಯೋಜನಾ ವ್ಯಾಪ್ತಿ ಯೋಜನಾ ಗಾತ್ರ ಇತ್ಯಾದಿ ವಿವರಗಳನ್ನು ಒದಗಿಸುವುದು;

ಋ) ಈ ನಿಟ್ಟಿನಲ್ಲಿ ಕಾವೇರಿ ನೀರಾವರಿ ನಿಗಮವು ಕೈಗೊಂಡಿರುವ ಕ್ರಮಗಳೇನು ಹಾಗೂ ವಿಳಂಬಕ್ಕೆ ಕಾರಣಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ರೂಪಿಸಿದೆ

ಆ) ಸರ್ಕಾರಿ ಆದೇಶ ಸಂಖ್ಯೆ:ಜಸಂಇ 186 ಎನ್‌ಹೆಚ್‌ಪಿ 2000 ದಿ:8–10–03 ರಂದು ನೀರು ಒದಗಿಸುವ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆ.

ಇ,ಈ,ಉ,ಊ) ನಾಲೆಯಿಂದ ನೀರನ್ನು ಕುಡಿಯುವ ಸಲುವಾಗಿ ನಿಗಮದಿಂದ ಅನುಮತಿ ನೀಡಿದ್ದು ಸಂಬಂಧಿಸಿದ ಕಾಮಗಾರಿಗಳ ನಿರ್ವಹಣೆ ಜಿಲ್ಲಾ ಪಂಚಾಯತ್ ತುಮಕೂರು ಇವರ ವ್ಯಾಪ್ತಿಗೆ ಬರುವುದರಿಂದ ಸದರಿ ಕಾಮಗಾರಿಗಳ ಬಗ್ಗೆ ಕ್ರಮ ಕೈಗೊಳ್ಳಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆರವರಿಗೆಕೋರಲಾಗಿದೆ.

ಋ) ರೇಖಾ ಅಂದಾಜು ರೂ.28 ಕೋಟಿಗಳಿಗೆ ತಯಾರಿಸಿ ವಿವರವಾದ ಅಂದಾಜು ಪತ್ರಿಕೆ ತಯಾರಿಕೆ ಹಂತದಲ್ಲಿದೆ ಎಂದು ಜಿಲ್ಲಾ ಪಂಚಾಯಿತ್, ತುಮಕೂರುರವರು ವರದಿ ಮಾಡಿರುತ್ತಾರೆ.

962(800)ಶ್ರೀ ಕೃಷ್ಣಾ ಪಾಲೇಮಾರ್ (ಸುರತ್ಕಲ್) : ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ನಿತ್ಯ ನಿರಂತರ ನೀರು ಸರವರಾಜಿನ ಯೋಜನೆಯನ್ನು ಉತ್ತರ ಕನ್ನಡದ ನಗರಗಳಿಗೆ ಅನುಷ್ಠಾನಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮವು ಈ ಕಾರ್ಯಕ್ರಮವನ್ನು ಯಾವ ಸಂಸ್ಥೆಗಳ ಮೂಲಕ ಜಾರಿಗೆ ತರಲು ಕ್ರಿಯಾ ಯೋಜನೆಗಳನ್ನು ರೂಪಿಸಿದೆ :

ಇ) ರೂಪಿಸಿದ್ದಲ್ಲಿ ವಿವರಗಳೇನು :

ಈ) ಉತ್ತರ ಕನ್ನಡ ಭಾಗದ ಯಾವ ನಗರಗಳಿಗೆ ಪ್ರಥಮ ಹಂತದಲ್ಲಿ ಈ ಯೋಜನೆಯನ್ನು ಅನ್ವಯಿಸಲು ಕ್ರಮ ಜರುಗಿಸಲಾಗುವುದು?

ಶ್ರೀ ಎಸ್.ಆರ್.ಮೋರೆ (ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು):

ಅ) ನಿತ್ಯ ನಿರಂತರ ನೀರು ಸರಬರಾಜು ಯೋಜನೆಯ ಪ್ರಸ್ತಾವನೆಯು ಉತ್ತರ ಕನ್ನಡ ಜಿಲ್ಲೆಯಲ್ಲಿ ಇರುವುದಿಲ್ಲ. ಹುಬ್ಬಳ್ಳಿ–ಧಾರವಾಡ, ಗುಲ್ಬರ್ಗಾ ಹಾಗೂ ಬೆಳಗಾವಿ ನಗರಗಳ ಆಯ್ದ ಭಾಗದಲ್ಲಿ (ಪ್ರದರ್ಶನ ವಲಯ) ಮಾತ್ರ ನಿರಂತರ ನೀರು ಸರಬರಾಜು ಯೋಜನೆಯನ್ನು ವಿಶ್ವಬ್ಯಾಂಕ್ ನೆರವಿನೊಂದಿಗೆ ಅನುಷ್ಠಾನಗೊಳಿಸಲು ಪ್ರಸ್ತಾಪಿಸಿಲಾಗಿದೆ.

ಆ) ವಿಶ್ವಬ್ಯಾಂಕ್ ನೆರವಿನೊಂದಿಗೆ ಅನುಷ್ಠಾನಗೊಳಿಸುವ ನಿತ್ಯ ನಿರಂತರ ನೀರು ಸರಬರಾಜು ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮತ್ತು ಸಂಬಂದಪಟ್ಟ ನಗರ ಪಾಲಿಕೆ ಮುಖಾಂತರ ಯೋಜನೆ ಜಾರಿಗೆ ತರಲು ಉದ್ದೇಶಿಸಲಾಗಿದೆ.

ಇ) ಈ ಕಾರ್ಯವ್ರಮದಡಿ ನಗರಗಳಿಗೆ ಸಗಟು ನೀರು ಸರಬರಾಜು ಸುಧಾರಣೆ ಕಾಮಗಾರಿಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮುಖಾಂತರ ಹಾಗೂ ಆಯ್ದ ಭಾಗದಲ್ಲಿ (ಪ್ರದರ್ಶನ ವಲಯ) ನಿತ್ಯ ನಿರಂತರ ನೀರು ಸರಬರಾಜು ಯೋಜನೆ ಕಾಮಗಾರಿಗಳನ್ನು ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಯಿಂದ ಕೈಗೊಳ್ಳಲು ಕ್ರಮ ಯೋಜಿಸಿ ರೂಪಿಸಲಾಗಿದೆ.

ಈ) ಪ್ರಥಮ ಹಂತದಲ್ಲಿ ಉತ್ತರ ಕನ್ನಡ ಭಾಗದ ನಗರಗಳಲ್ಲಿ ನಿತ್ಯ ನಿರಂತರ ನೀರು ಸರಬರಾಜು ಯೋಜನೆಯನ್ನು ಅನುಷ್ಠಾನಗೊಳಿಸುತ್ತಿಲ್ಲ. ಅದರೆ ಏ ಡಿ ಬಿ ನೆರವಿನ ಕುಡ್ ಸೆಂಪ್ ಯೋಜನೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಅಂಕೋಲ, ಭಟ್ಕಳ, ದಾಂಡೇಲಿ ಮತ್ತು ಸಿರ್ಸಿ ನಗರಗಳ ಹಾಲಿ ಇರುವ ನೀರು ಸರಬರಾಜು ವ್ಯವಸ್ಥೆಯ ನವೀಕರಣ ಮತ್ತು ಅಭಿವೃದ್ಧಿ ಕಾಮಗಾರಿಗಳು ಜಾರಿಯಲ್ಲಿರುತ್ತದೆ.

964(802) ಶ್ರೀ ಕೃಷ್ಣ ಪಾಲೇಮಾರ್ ಜೆ(ಸುರತ್ಕಲ್) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ವೃತ್ತಿರಂಗಭೂಮಿ ಪುನಶ್ಚೇತನಕ್ಕಾಗಿ ಸರಕಾರ ಕಾರ್ಯಕ್ರಮಗಳನ್ನೇನಾದರೂ ಹಮ್ಮಿಕೊಂಡಿದೆಯೇ;

ಆ) ಹೌದಾದಲ್ಲಿ, ವಿವರಗಳೇನು;

ಇ) ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ನಾಟಕ ಪ್ರದರ್ಶನಕ್ಕೆ ಅನುಮತಿ ನೀಡುವಲ್ಲಿ ಜಿಲ್ಲಾಡಳಿತ ಅನುಸರಿಸುವ ನಿಯಮಗಳೇನು;

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಹೌದು

ಆ) ವೃತ್ತಿ ರಂಗ ಭೂಮಿ ಪುನಶ್ಚೇತನಕ್ಕಾಗಿ ಇಲಾಖೆಯು ಕಾಯಕಲ್ಪ ಯೋಜನೆಯಡಿ

1) ಕಂಪನಿಗಳಿಗೆ ಅವುಗಳ ವೇಶಭೂಷಣರಂಗಪರಿಕರಕ್ಕೆ ನೆರವು ನೀಡುವ ಹಿನ್ನೆಲೆಯಲ್ಲಿ ಧನ ಸಹಾಯ ನೀಡುತ್ತಿದೆ.

2) ರಂಗ ಭೂಮಿಕಲಾವಿಧರನ್ನು ಒಂದೆಡೆ ಸೇರಿಸಿ ಪರಸ್ಪರ ಸಂವಾದಿಸುವ ಹಾಗೂ ಕಲಾಪ್ರದರ್ಶನ ಏರ್ಪಡಿಸುವ ಉದ್ದೇಶದಿಂದ ರಂಗಸುಗ್ಗಿ ಯೋಜನೆಯಡಿ ಪೌರಾಣಿಕ ನಾಟಕಗಳಿಗೆ ಧನ ಸಹಾಯ ನೆರವು ನೀಡಲಾಗುತ್ತಿದೆ.